# ಸೆಲೆಬ್ರಿಟಿ

■ ಹನಿ

## ‘ಟಫ್’ ಪ್ರೇಮ್‌ಜಿ



ವಿಪ್ರೊ ಅಧ್ಯಕ್ಷ ಅಜೀಮ್ ಹಾಶಿಂ ಪ್ರೇಮ್‌ಜಿ (ಬರ್ತ್‌ಡೇ ಜುಲೈ 24, 1945) ತಣ್ಣಗೆ ‘ಗರಂ’ ಆಗಿದ್ದಾರೆ! ದೊಡ್ಡ ಸುದ್ದಿಯೇ ಆಗದಂತೆ ತಮ್ಮ ವಿಪ್ರೊ ಟೆಕ್ನಾಲಜೀಸ್‌ನ ಇಬ್ಬರು ಜಂಟಿ ಸಿಇಓಗಳನ್ನು ಕೆಲಸದಿಂದ ಕಿತ್ತು ಹಾಕಿ, ಹೊಸ ಸಿಇಓ ಆಗಿ ಟಿ.ಕೆ. ಕುರಿಯನ್‌ರನ್ನು ನೇಮಿಸಿದ್ದಾರೆ. ವಿಪ್ರೊ ಕಂಪೆನಿಯಲ್ಲಿ ಯಾರನ್ನೇ ಕೆಲಸದಿಂದ ತೆಗೆಯುವುದಾದರೂ (ಬೇರೆ ಕೆಲಸ ಹುಡುಕಲು) ಸಮಯ ಕೊಟ್ಟು ತೆಗೆಯುವುದು ವಾಡಿಕೆ. ಆದರೆ ಅತ್ಯುನ್ನತ ಹುದ್ದೆಯಲ್ಲಿರುವ ಇಬ್ಬರು ರಾತ್ರಿ ಬೆಳಗಾಗುವುದರೊಳಗೆ ಜಾಗ ಖಾಲಿ ಮಾಡಿದ್ದಾರೆ. ಅತ್ಯಂತ ‘ಸಾಫ್ಟ್ ಆಡಳಿತಗಾರ’ ಎಂಬಂತಿದ್ದ ಪ್ರೇಮ್‌ಜಿಯವರ ಈ ‘ಟಫ್’ ನಿರ್ಧಾರ ಉದ್ಯಮದಲ್ಲಿ ಅಚ್ಚರಿ ಮೂಡಿಸಿದೆ.

ವಿಪ್ರೊ ಆದಾಯದಲ್ಲಿ ಮೂರನೇ ಎರಡರಷ್ಟು ಬರುವುದೇ ಐಟಿ ಉದ್ಯಮದಿಂದ. ಅಂಥದ್ದರಲ್ಲಿ ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ನಿವ್ವಳ ಲಾಭ ಕೇವಲ 9.9 ಶೇಕಡಾ ಮಾತ್ರ ಹೆಚ್ಚಳವಾಗಿದೆ. ಅದಕ್ಕಿಂತ ಹೆಚ್ಚಾಗಿ ಲಾಭ ಗಳಿಕೆಯಲ್ಲಿ ಟಿಸಿಎಸ್, ಇನ್‌ಫೋಸಿಸ್, ಎಚ್‌ಸಿಎಲ್, ಕಾಗ್ನಿಜೆಂಟ್ ಕಂಪೆನಿಗಳೆಲ್ಲ ವಿಪ್ರೋವನ್ನು ಹಿಂದಿಕ್ಕಿರುವುದು ಪ್ರೇಮ್‌ಜಿ ನಿರ್ಧಾರಕ್ಕೆ ಕಾರಣ ಎನ್ನಲಾಗಿದೆ.

ಕರಾಚಿ ಸಂಜಾತ ಅಜೀಮ್, ಮುಂಬೈ ಸೈಂಟ್ ಮೇರೀಸ್‌ನಲ್ಲಿ ಓದಿದವರು. ಅಮೆರಿಕದ ಸ್ಟಾನ್‌ಫೋರ್ಡ್‌ನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಓದುತ್ತಿದ್ದಾಗಲೇ ತಂದೆ ಎಂ.ಎಚ್. ಪ್ರೇಮ್‌ಜಿ ಸತ್ತ ಸುದ್ದಿ ಬಂತು. ಜಿನ್ನಾ ಕರೆದರೂ ಪಾಕಿಸ್ತಾನಕ್ಕೆ ಹೋಗದೆ, ಭಾರತದಲ್ಲೇ ಉಳಿದ ತಂದೆ ಸ್ಥಾಪಿಸಿದ್ದ ಉದ್ಯಮ– ವೆಸ್ಟರ್ನ್ ಇಂಡಿಯಾ ಪ್ರೊಡಕ್ಟ್ಸ್ (ಈಗ ವಿಪ್ರೊ)ಗೆ 21ರ ಎಳೇ ವಯಸ್ಸಿನಲ್ಲೇ ಹೆಗಲು ಕೊಟ್ಟವರು ಅಜೀಮ್. ಶಿಯಾ ಮುಸ್ಲಿಂ ಕುಟುಂಬದ ಈ ಕುಡಿ, ಕಂಪೆನಿಯನ್ನು ತಣ್ಣಗೇ ಸದ್ದಿಲ್ಲದಂತೆ ಕಟ್ಟಿ ಬೆಳೆಸಿದರು. 17 ಶತಕೋಟಿ ಅಮೆರಿಕನ್ ಡಾಲರ್ ಆಸ್ತಿ ಹೊಂದಿರುವ ಅಜೀಮ್ ಈಗ ಭಾರತದ ಮೂರನೇ ಅತಿದೊಡ್ಡ ಶ್ರೀಮಂತ. ಹಾಗಾಗಿ ಎಲ್ಲರ ಕಣ್ಣೂ ಅವರ ಮೇಲಿದೆ. ಅವರದ್ದೊಂದು ಸಣ್ಣ ನಿರ್ಧಾರವೂ ಉದ್ಯಮದಲ್ಲಿ ದೊಡ್ಡ ವ್ಯತ್ಯಾಸ ಮಾಡಲಿದೆ.

## ಮದುವೆಯ ಕನಸು!

ಈಕೆ ಹುಟ್ಟಿದ್ದು ನಮ್ಮ ‘ಮಕ್ಕಳ ದಿನಾಚರಣೆ’ಯಂದು. (1954, ನ.14) ಆದರೆ ‘ಮದುವೆಯ ಭಾಗ್ಯ’ ಇನ್ನೂ ಸಿಕ್ಕಿಲ್ಲ. ಈಕೆ ಕಾಂಡೊಲೀಸಾ ರೈಸ್. ಅಧ್ಯಕ್ಷ ಜಾರ್ಜ್ ಬುಶ್ ಕಾಲದಲ್ಲಿ ಅಮೆರಿಕದ ಸ್ಟೇಟ್ ಸೆಕ್ರೆಟರಿಯಾಗಿ ಕೆಲಸ ಮಾಡಿ, ‘ಅತ್ಯಂತ ಶಕ್ತಿಶಾಲಿ ಮಹಿಳೆ’ ಎನ್ನಿಸಿಕೊಂಡಿದ್ದ ಕಾಂಡೊಲಿಸಾ, ಅಧಿಕಾರ ಹೋದ ಬಳಿಕ, ತಣ್ಣಗೆ ಸ್ಟಾನ್‌ಫೋರ್ಡ್ ಬಿಸಿನೆಸ್ ಸ್ಕೂಲ್‌ನಲ್ಲಿ ನಿರ್ದೇಶಕಿಯಾಗಿದ್ದರು. ಈಗ ಸಿಎನ್‌ಎನ್‌ಗೆ ನೀಡಿರುವ ಸಂದರ್ಶನದಲ್ಲಿ ತನ್ನ ಮದುವೆಯ ಕನಸಿನ ಬಗ್ಗೆ ಮಾತನಾಡಿ ಮತ್ತೆ ಸುದ್ದಿಯಾಗಿದ್ದಾರೆ.

‘ಮದುವೆ ಆಗಬೇಕೆಂದು ನನಗೂ ಕನಸಿದೆ. ಯಾರಾದರೂ ನನ್ನನ್ನು ಮದುವೆಯಾಗಲು ಇಂದಲ್ಲ ನಾಳೆ ಬಂದಾರು. ಅಲ್ಲಿಯವರೆಗೆ ಕಾಯಲೇಬೇಕು. ಫೇರಿ ಟೇಲ್‌ನಂತೆ ನನ್ನ ಮದುವೆ ನಡೆಯುವುದಿಲ್ಲ ಅನ್ನುವುದೂ ನನಗೆ ಗೊತ್ತಿದೆ’ ಎಂದಿದ್ದಾರೆ ಸಂದರ್ಶನದಲ್ಲಿ ರೈಸ್.

2005ರಿಂದ 2009ರವರೆಗೆ ಸ್ಟೇಟ್ ಸೆಕ್ರೆಟರಿಯಾಗಿ ಮೆರೆದ ಕಾಂಡೊಲೀಸಾ, ಔತಣ ಕೂಟವೊಂದರಲ್ಲಿ ಮಾತನಾಡುವಾಗ, ‘ನನ್ನ ಗಂಡ ಬುಶ್ ಅವರೇ..’ ಎಂದು ಬಾಯಿ ತಪ್ಪಿ ಹೇಳಿ, ಬಳಿಕ ತಿದ್ದಿಕೊಂಡಿದ್ದೂ ಇದೆ. ಸಂಗೀತ– ವಿಜ್ಞಾನ ಕಲಿಸುತ್ತಿದ್ದ ಅಮ್ಮನ ಮಗಳಾಗಿ ಹುಟ್ಟಿ, ಬಾಲ್ಯದಲ್ಲಿ ಪಿಯಾನೊ ಕ್ಲಾಸ್ ನಡೆಸುತ್ತಿದ್ದ ಕಾಂಡೊಲೀಸಾ, 57ರ ಇಳಿ ವಯಸ್ಸಿನಲ್ಲಿ ಮದುವೆಯ ಬಗ್ಗೆ ಮಾತನಾಡಿ ಎಲ್ಲರ ಕುತೂಹಲ ಕೆರಳಿಸಿದ್ದಾರೆ.



## ಮತ್ತೆ ಹುಸೇನ್!



ಮಕ್ಬೂಲ್ ಫಿದಾ ಹುಸೇನ್ (ಬರ್ತ್‌ಡೇ: ಸೆಪ್ಟೆಂಬರ್ 17, 1915) ಕಳೆದ ನಾಲ್ಕೂವರೆ ವರ್ಷಗಳಿಂದ ಭಾರತದಿಂದ ಹೊರಗಿದ್ದರೂ, ಅವರ ಕಲಾಕೃತಿಗಳು ಪದೇ ಪದೇ ಸುದ್ದಿ ಮಾಡುತ್ತವೆ. ದೆಹಲಿ ಆರ್ಟ್ ಗ್ಯಾಲರಿಯ ಪ್ರದರ್ಶನದಲ್ಲಿ ಅವರ ಮೂರು ತೈಲಚಿತ್ರಗಳನ್ನು ತೂಗು ಹಾಕಿದ್ದಕ್ಕೆ ಬಲಪಂಥೀಯರಿಂದ ಬೆದರಿಕೆ ಕರೆ ಬಂದಿದೆ. ಚಿತ್ರಗಳನ್ನು ಪ್ರದರ್ಶನದಿಂದ ಹಿಂದಕ್ಕೆ ಪಡೆದ ಆರ್ಟ್ ಗ್ಯಾಲರಿಯವರು, ಈಗ ಪೊಲೀಸರ ಬೆಂಬಲದಿಂದಾಗಿ ಮತ್ತೆ ಪ್ರದರ್ಶನ ನಡೆಸಿದ್ದಾರೆ.

ಪಂಡರಾಪುರದಲ್ಲಿ ಹುಟ್ಟಿದ ಹುಸೇನ್ ಸಾಹೇಬರಿಗೆ ವಿವಾದ ಮತ್ತು ಖ್ಯಾತಿ ಹೊಸತಲ್ಲ. ಅವರು 1970ರಲ್ಲಿ ಬಿಡಿಸಿದ ಸರಸ್ವತಿಯ ಚಿತ್ರಗಳು, 26 ವರ್ಷಗಳ ಬಳಿಕ, 1996ರಲ್ಲಿ ದೊಡ್ಡ ವಿವಾದಕ್ಕೆ ಕಾರಣವಾದವು. ಹಿಂದೂ ಸಂಘಟನೆಗಳ ಕೆಂಗಣ್ಣಿಗೆ ಗುರಿಯಾದವು. ಪ್ರತಿಭಟನೆಯ ಕಾವು ಜೋರಾದಾಗ 2006ರಲ್ಲಿ ದುಬೈಗೆ ವಲಸೆ ಹೋದ ಹುಸೇನ್ ಈಗ ಕತಾರ್ ಪೌರತ್ವ ಪಡೆದಿದ್ದಾರೆ. 1952ರಲ್ಲಿ ಜೂರಿಚ್‌ನಲ್ಲಿ ತಮ್ಮ ಮೊದಲ ಏಕವ್ಯಕ್ತಿ ಪ್ರದರ್ಶನ ನಡೆಸಿದ ಬಳಿಕ ಕಲಾ ಪ್ರಪಂಚದಲ್ಲಿ ಅವರ ಖ್ಯಾತಿಯ ಹುಡಿ ಹಾರಿತು. 67ರಲ್ಲಿ ನಿರ್ದೇಶಿಸಿದ ಮೊದಲ ಸಿನಿಮಾ ‘ಥ್ರೂ ದಿ ಐಸ್ ಆಫ್ ಎ ಪೇಂಟರ್’ ಬರ್ಲಿನ್ ಫಿಲಂ ಫೆಸ್ಟಿವಲ್‌ನಲ್ಲಿ ‘ಗೋಲ್ಡನ್ ಬೀರ್’ ಪ್ರಶಸ್ತಿ ಗೆದ್ದಿತು. ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ– ಹೀಗೆ ಇದ್ದೆಲ್ಲ ಪ್ರಶಸ್ತಿಗಳನ್ನು ಬಾಚಿಕೊಂಡಿರುವ ಈ ’ಭಾರತದ ಪಿಕಾಸೊ’ 96ರ ಇಳಿ ವಯಸ್ಸಿನಲ್ಲೂ ‘ಸುದ್ದಿಶೂರ’!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65